**CFC.R.P.67** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ**

| Form No.4(Civil)<br>(R.P.No.57) |
|---|

**<u>ಎಸ್ .ಸಿ. ನಂಃ 73/2019</u>**

ಪಿ.ಡಬ್ಲ್ಯೂ ನಂಃ **02**
ಸಿ.ಡಬ್ಲ್ಯೂ ನಂಃ **03**
ಸಾಕ್ಷಿಯನ್ನು ದಿನಾಂಕಃ **15-07-2024**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಂಗಪ್ಪ |
| ತಂದೆಯ ಹೆಸರು | ಃ | ದೇವಪ್ಪ |
| ವಯಸ್ಸು | ಃ | **43** ವರ್ಷ |
| ಉದ್ಯೋಗ | ಃ | ಕೂಲಿ/ಒಕ್ಕಲುತನ |
| ವಾಸ ಸ್ಥಳ | ಃ | ಸಂಗನಾಳ್. |

<u>ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ</u>

ಈಗ ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. <u>ದಾಖಲೆಯನ್ನು ನಿಪಿ **3** ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ **3**(ಎ) ಎಂದು ಗುರುತಿಸಲಾಯಿತು.</u> **2018** ರಲ್ಲಿ ಆ ಸಹಿಯನ್ನು ಯಲಬುರ್ಗಾ ಪೊಲೀಸ ಠಾಣೆಯಲ್ಲಿ ಮಾಡಿದ್ದೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರಲಿಲ್ಲ. ನಿಪಿ-**3** ರಲ್ಲಿ ಎನು ಬರೆದಿದೆ ಎಂದು ಗೊತ್ತಿಲ್ಲ. ಸಹಿ ಮಾತ್ರ ಮಾಡಿಸಿಕೊಂಡರು.

**2.** ಈಗ ನೋಡಿದ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆಯನ್ನು <u>ನಿಪಿ **4** ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ **4**(ಎ) ಎಂದು ಗುರುತಿಸಲಾಯಿತು.</u> **2018** ರಲ್ಲಿ ಆ ಸಹಿಯನ್ನು ಸಹಾ ಯಲಬುರ್ಗಾ ಪೊಲೀಸ ಠಾಣೆಯಲ್ಲಿ ಮಾಡಿದ್ದೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರಲಿಲ್ಲ. ನಿಪಿ-**4** ರಲ್ಲಿ ಎನು ಬರೆದಿದೆ ಎಂದು ಗೊತ್ತಿಲ್ಲ. ಸಹಿ ಮಾತ್ರ ಮಾಡಿಸಿಕೊಂಡರು.

**3.** ಈ ಕೇಸಿನ ಆರೋಪಿಗಳ ಪರಿಚಯ ನನಗೆ ಇಲ್ಲ. ಪೊಲೀಸರು ಪಂಚನಾಮೆ ಮಾಡಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರಲಿಲ್ಲ. ಈಗ ನೋಡಿದ ಫೋಟೊದಲ್ಲಿ ನಾನು ಇದ್ದೇನೆ. ಫೋಟೋವನ್ನು ನಿಪಿ-**5** ಎಂದು ಗುರುತಿಸಲಾಯಿತು. ಫೋಟೋವನ್ನು ಏಕೆ ತೆಗೆಯಲಾಯಿತು ಎಂದು ಗೊತ್ತಿಲ್ಲ.

**4.** ಈಗ ನನಗೆ ತೋರಿಸಿದ **1** ಕೊಡ್ಲಿ ಮತ್ತು ಎರಡು ಗಂಧದ ಕಟ್ಟಿಗೆಗಳನ್ನು ನಾನು ಈ ಹಿಂದೆ ನೋಡಿಲ್ಲ. ಸ್ವತ್ತು ಪಟ್ಟಿ **36/2018** ಐಟಂ ನಂಬರ **2** ರಿಂದ **4** ಇವುಗಳನ್ನು ಸಾಕ್ಷಿದಾರರಿಗೆ ತೋರಿಸಲಾಗಿದೆ ಎಂಬ ಕಾರಣಕ್ಕಾಗಿ ಅವುಗಳನ್ನು ಮುದ್ದೆಮಾಲು **1** ರಿಂದ **3** ಎಂದು ಗುರುತಿಸಲಾಯಿತು. ಆರೋಪಿಗಳು ಮುದ್ದೆಮಾಲು **1** ರಿಂದ **3** ಇವುಗಳನ್ನು ನನ್ನ ಮುಂದೆ ಪೊಲೀಸರಿಗೆ ತೋರಿಸಿರಲಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ

**5.** ದಿಃ **28-03-2018** ರಂದು ಮಧ್ಯಾಹ್ನ **3-00** ರಿಂದ **4-00** ಗಂಟೆಗೆಯವರೆಗೆ ದೂರದಾರರ ಹೊಲದಲ್ಲಿ ಬರೆದ ನಿಪಿ-**3** ಪಂಚನಾಮೆಗೆ ಎಲ್ಲಾ ವಿಚಾರ ತಿಳಿದುಕೊಂಡು ಸಹಿ ಮಾಡಿದೆ ಎಂದರೆ ಸರಿಯಲ್ಲ. ದಿಃ**30-03-2018** ರಂದು ಮಧ್ಯಾಹ್ನ **12-00** ಗಂಟೆಗೆ **1** ಮತ್ತು **3** ನೇ ಆರೋಪಿಗಳು ತೋರಿಸಿದ ಮೇರೆಗೆ ಜಪ್ತು ಪಂಚನಾಮೆ ಮಾಡಿ ಮುದ್ದೆಮಾಲುಃ **1** ರಿಂದ **3** ಹಾಗೂ ಒಂದು ಮೋಟಾರ ಸೈಕಲ್ ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಬರೆದ ವಿಚಾರವನ್ನು ಓದಿ, ಹೇಳಿ ನನ್ನ ಸಹಿ ಪಡೆದಿರುವರು ಎಂದರೆ ಸರಿಯಲ್ಲ. ಆ ಸಮಯ ಫೋಟೋ ತೆಗೆದರು ಎಂದರೆ ನನ್ನನ್ನು ನಿಂತುಕೋ ಎಂದು ಹೇಳಿ ಫೋಟೋ ತೆಗೆದರು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ